ನಾನು ಹೇಳೋದನ್ನ ಕೇಳಿಸಿಕೊಳ್ಳಿ. ನಿನ್ನೆ ನಂಗೆ ವೀಕ್ಲಿ ಆಫ್ ಇತ್ತು. ಹೆಂಡ್ತಿ, ಮಕ್ಕಳು ಊರಿಗೆ ಹೋಗಿದ್ರು. ಇಡೀ ದಿನ ಮಲಗಬೇಕು ಅಂದ್ಕಂಡಿದ್ದೆ. ಆದರೆ, ನನ್ನ ಮನೆ ಮೇಲಿನ ಪೋಷನ್‌ನಲ್ಲಿ ರೆಂಟಿಗೆ ಇದ್ದ ಸುಹಾಸ್ ರಾನಡೆ ಅನ್ನೋ ಹುಡುಗ ಸೂಯಿಸೈಡ್ ಮಾಡಿಕೊಂಡದ್ದು ಗೊತ್ತಾಗಿ ಪೊಲೀಸರು ಬಂದು ಸ್ಟೇಷನ್ನಿಗೆ ಬನ್ನಿ ಎಂದರು. ಸುಹಾಸ್ ಮೊದಲು ಮುಂಬೈನಲ್ಲಿ ಯಾವುದೋ ಟೀವಿ ಚಾನಲ್‌ನಲ್ಲಿ ಕೆಲಸ ಮಾಡ್ತಿದ್ದನಂತೆ. ಆ ಕೆಲಸ ಬಿಟ್ಟು ಇಲ್ಲಿ ಯಾವುದಾದರೂ ಇಂಗ್ಲಿಷ್ ಪತ್ರಿಕೆ ಸೇರಬೇಕು ಅಂತ ಬಂದಿದ್ದ. ನನ್ನ ಫ್ರೆಂಡೊಬ್ಬರು ಹೇಳಿದರು ಅಂತ ಅವನಿಗೆ ನನ್ನ ಮನೆಯನ್ನು ರೆಂಟಿಗೆ ಕೊಟ್ಟಿದ್ದೆ. ಈ ಕೇಸ್ನಲ್ಲಿ ನೀವೇ ಪ್ರೈಮ್‌ವಿಟ್ನೆಸ್. ನಿಮ್ಮ ಸ್ಟೇಟ್‌ಮೆಂಟ್ ಬೇಕು ಬನ್ನಿ ಎಂದು ಪೊಲೀಸರು ಒತ್ತಾಯ ಮಾಡಿ ಕರೆದುಕೊಂಡು ಹೋದರು. ಸ್ಟೇಷನ್ನಿಗೆ ಹೋದ ಮೇಲೆ ಗೊತ್ತಾಯ್ತು ಮೋಹನ್ ಭಂಡಾರಿ ಅನ್ನೋ ನನ್ನ ಕ್ಲಾಸ್‌ಮೇಟ್ ಅಲ್ಲಿ ಸಿಐ ಅಂತ!'

'ಸೂಯಿಸೈಡ್ ಮಾಡಿಕೊಂಡಿರೋ ಸುಹಾಸನ ಬಗ್ಗೆ ಮಾಹಿತಿ ಸಿಗ್ತಿಲ್ಲ. ಅವನ ಹಿನ್ನೆಲೆ ಪತ್ತೆ ಮಾಡೋಕೆ ನಿನ್ನ ಸಹಾಯ ಬೇಕು...' ಎಂದು ಭಂಡಾರಿ ಕೇಳಿದರು. ಅವರ ಜತೆ ಸುಹಾಸನ ಮನೆಗೆ ಬಂದು ತಡಕಾಡಿದ ಮೇಲೆ ಕೆಲವು ವಿಷಯಗಳು ಗೊತ್ತಾದವು. ಆಮೇಲೆ ನಂಗೆ ಪರಿಚಯ ಇದ್ದ ಬೆಳಗಾಂ, ಹುಬ್ಬಳ್ಳಿ ಕಡೆಯ ಜರ್ನಲಿಸ್ಟ್‌ಗಳು, ಬೇರೆ ಫ್ರೆಂಡ್ಸುಗಳು ಮತ್ತು ಸುಹಾಸ್ ಮೊದಲು ಕೆಲ್ಸ ಮಾಡ್ತಿದ್ದ ಮುಂಬೈನ ಚಾನಲ್‌ಗೆ ಫೋನ್ ಮಾಡಿ ವಿಚಾರಿಸಿದೆ. ಹೆಚ್ಚು ಪ್ರಯೋಜನ ಆಗಲಿಲ್ಲ. ಹಾಳಾದವನು ಸೂಯಿಸೈಡ್ ನೋಟನ್ನೂ ಬರೆದಿಟ್ಟಿಲ್ಲ! ಅವನ ಪರ್ಸ್‌ನಲ್ಲಿ ವೆಂಕಟರಾವ್ ರಾನಡೆ ಅನ್ನೋರ ನಂಬರ್ ಸಿಕ್ತು. ಅವರಿಗೆ ಫೋನ್ ಮಾಡಿದರೆ ಅವರು ಮೀರಜ್‌ನಲ್ಲಿ ಆಸ್ಪತ್ರೆಯಲ್ಲಿ ಇದ್ದೀನಿ ಅಂದರು.

'ನನ್ನ ಎರಡೂ ಕಿಡ್ನಿಗಳು ಫೇಲ್ ಆಗಿವೆ. ಡಯಾಲಿಸಿಸ್‌ನಲ್ಲಿ ಇದ್ದೀನಿ. ನೀವೇ ಅಂತ್ಯಕ್ರಿಯೆ ಮಾಡಿ ಪುಣ್ಯ ಕಟ್ಟಿಕೊಳ್ಳಿ. ಚಿತೆಯ ಸ್ವಲ್ಪ ಬೂದಿಯನ್ನು ಕೊರಿಯರ್‌ನಲ್ಲಿ ಮೂಲಕ ಕಳಿಸಿ. ನಾನು ಅವನ ಕರ್ಮಗಳನ್ನು ಮಾಡಿಸ್ತೀನಿ...' ಅಂದರು. ಸುಹಾಸನ ಬಾಡಿಯನ್ನು ಯಾರಿಗೆ ಹ್ಯಾಂಡೋವರ್ ಮಾಡಬೇಕು ಅನ್ನೋದು ಗೊತ್ತಾಗದೆ ಭಂಡಾರಿ ಗೊಂದಲದಲ್ಲಿದ್ದರು. ಕೊನೆಗೆ ನೀನೇ ಬಾಡಿ ರಿಸೀವ್ ಮಾಡ್ಕೋ. ನಾವೇ ಅಂತ್ಯಕ್ರಿಯೆ ಮಾಡೋಣ ಅಂದರು. ಅಷ್ಟರಲ್ಲಿ ಯಾರೋ ರಾಯಭಾಗದಿಂದ ಫೋನ್ ಮಾಡಿ, ನಾವು ಸುಹಾಸನ ಕಡೆಯವರು. ಬಾಡಿ ತಗಂಡು ಹೋಗೋಕೆ ಬರ್ತಿದ್ದೀವಿ ಅಂದರು. ಬಾಡಿಯನ್ನು ಮಾರ್ಚರಿಯಲ್ಲಿ ಇರಿಸೋ ವ್ಯವಸ್ಥೆ ಮಾಡಿ, ನಾನು ಮನೆಗೆ ಬಂದಾಗ ಬೆಳಗ್ಗೆ ಆರು ಗಂಟೆ ಆಗಿತ್ತು. ನಿನ್ನೆ ಇಡೀ ಹಗಲು, ರಾತ್ರಿ ಸ್ಟೇಷನ್ನಿನಲ್ಲಿದ್ದೆ. ತುಂಬಾ ಸುಸ್ತಾಗಿದೆ ಸರ್. ಇವತ್ತು ರಜಾ ಬೇಕು. ಸುಹಾಸನ ಬಾಡಿ ಹ್ಯಾಂಡೋವರ್ ಮಾಡೋ ಟೈಮಲ್ಲಿ ನಾನಿರಬೇಕು ಅಂತ ಭಂಡಾರಿ ಹೇಳಿದ್ದಾರೆ. ಈ ವಿಷಯ ಫೋನಲ್ಲಿ ಹೇಳೋದು ಬೇಡ ಅನ್ನಿಸಿ ಲೀವ್ ಅಪ್ಲಿಕೇಷನ್ ಕೊಟ್ಟು ಬರೋಣ ಅಂತ ಆಫೀಸಿಗೆ ಹೊರಟಿದ್ದೆ. ಎಸ್ವಿ ಕಾಲೇಜ್ ಸ್ಟಾಪಲ್ಲಿ ಬಸ್ಸಿಗೆ ಕಾಯ್ತಾ ನಿಂತಿದ್ದೆ. ಅಲ್ಲಿಗೆ ಬಂದ ಯಾವುದೋ ಬಸ್ಸಿಗೆ ಹತ್ತಿ ಕೂತದ್ದಷ್ಟೇ ಗೊತ್ತು. ಕೂಡಲೇ ನಿದ್ದೆ ಬಂತು. ಎಚ್ಚರವಾದಾಗ ಮಾಗಡಿ ಹತ್ತಿರ ಬೆಳಗುಂಬ ಅನ್ನೋ ಊರಲ್ಲಿದ್ದೆ' ಎನ್ನುತ್ತಾ ಚೀಫ್‌ನ ಪ್ರತಿಕ್ರಿಯೆಗೆ ಕಾದ.

ಅವನ ಮಾತಿಗೆ ಏನು ಹೇಳಬೇಕು ಅನ್ನೋದು ಗೊತ್ತಾಗದೆ ಅವರು ಸುಮ್ಮನಿದ್ದರು. 'ಸರಿ, ಸರಿ ನೀವು ರಜೆ ಹಾಕಿದ್ದೀರಿ ಅಂತ ನ್ಯೂಸ್ ಎಡಿಟರ್‌ಗೆ ಹೇಳ್ತೀನಿ. ಆದರೆ, ನಾಳೆ ಬರಲೇಬೇಕು, ಸೆಷನ್ ನಡೆಯೋ ಟೈಮಲ್ಲಿ ರಜಾ ಕೊಡೋಕಾಗಲ್ಲ. ನಾಳೆ ಬಂದು ಲೀವ್ ಲೆಟರ್ ಕೊಡಿ, ಏನಾದರೂ ಹೆಲ್ಪ್ ಬೇಕಿದ್ದರೆ ಕೇಳಿ' ಎಂದು ಹೇಳಿ ಫೋನಿಟ್ಟರು.

ರಾಜೀವ ಸಿಟಿ ಮಾರ್ಕೆಟ್‌ಗೆ ಬಂದಾಗ ಮೂರು ಗಂಟೆ. ಬಸ್ಸಿಂದ ಇಳಿಯುತ್ತಿದ್ದಂತೆ ಎರ್‍ರಾಬಿರ್‍ರಿ ಓಡಾಡುತ್ತಿದ್ದ ವೆಹಿಕಲ್‌ಗಳನ್ನು ನೋಡಿ ಗಾಬರಿಯಾಯಿತು. ಆಟೋ, ಸ್ಕೂಟರು, ಬೈಕುಗಳು, ಬಿಎಂಟೀಸಿ ಬಸ್ಸುಗಳು, ತಳ್ಳೋ ಗಾಡಿಗಳನ್ನು ನೋಡಿ ನಾನು ಬೇರೆಲ್ಲಿಗಾದರೂ ಬಂದಿರಬಹುದೇ ಅನ್ನಿಸಿತು! ಜಾತ್ರೆಯಲ್ಲಿ ತಪ್ಪಿಸಿಕೊಂಡ ಹುಡುಗನಂತೆ ಕೆಲ ನಿಮಿಷಗಳು ಒಂದು ಕಡೆ ಸುಮ್ಮನೆ ನಿಂತ. ರಸ್ತೆಯ ಎರಡೂ ಬದಿಯಲ್ಲಿ ಹತ್ತಾರು ವಸ್ತುಗಳನ್ನು ನೆಲದ ಮೇಲೆ ಹರಡಿಕೊಂಡು 'ಬನ್ನಿ ಸಾರ್, ಬನ್ನಿ ಅಣ್ಣಾ' ಅಂತ ಪೈಪೋಟಿಗೆ ಬಿದ್ದವರಂತೆ ಚಪ್ಪಾಳೆ ತಟ್ಟಿ